# ಹೀಗೊಂದು ಕರಡೀ ಕಥೆ

## ಕಾಡುಪ್ರಾಣಿಗಳನ್ನು ಕಂಡರೆ ಊರಿನ ಜನರೇಕೆ ಹೀಗೆ ಹಿಂಸಾ ವಿನೋದಿಗಳಾಗುತ್ತಾರೆ?

ಚಿತ್ರ– ಲೇಖನ: **ಆರ್.ಕೆ. ಮಧು**







ಕಾಡಿನ ಕರಡಿಯನ್ನು ಜಾಂಬವಂತ ಎಂದು ಪೂಜಿಸುತ್ತೇವೆ. ಆದರೆ ಅದೇ ಕರಡಿ ಕಾಡು ಮರೆತು ಊರಿಗೆ ಬಂದರೆ ಅದನ್ನು ನಾವು ಸ್ವಾಗತಿಸುತ್ತೇವೆಯೆ? ಕಾಡಿನ ಪ್ರಾಣಿಗಳ ಕುರಿತು ನಮ್ಮಲ್ಲಿ ಇರುವ ನಂಬಿಕೆ– ಮೂಢನಂಬಿಕೆಗಳಿಗೆ ಎಷ್ಟೊಂದು ಅಂತರವಿದೆ!

ಗುಂಡ್ಲುಪೇಟೆಯ ಗರಗನ ಹಳ್ಳಿಗೆ ಇತ್ತೀಚೆಗೆ ಹೀಗೆ ಕಾಡು ತ್ಯಜಿಸಿ ಬಂದ ಕರಡಿಯೊಂದು 'ನಾಗರಿಕರ' ಜತೆಗೆ ತನ್ನ ಜೀವ ಉಳಿಸಿಕೊಳ್ಳಲು ನಡೆಸಿದ ಹೋರಾಟ ನಿಜಕ್ಕೂ ಕರುಣಾಜನಕ.

ಗರಗನ ಹಳ್ಳಿಯ ಸುತ್ತಲೂ 5–10 ಕಿ.ಮೀ ಅಂತರದಲ್ಲಿ ಹಲವು ಬೆಟ್ಟ ಗುಡ್ಡಗಳಿವೆ. ಇಲ್ಲೇ ಓಂಕಾರ ಅರಣ್ಯ ವಲಯವೂ ಇದ್ದು ಅದು ಹಲವಾರು ವನ್ಯಜೀವಿಗಳ ಆವಾಸ ಸ್ಥಳವಾಗಿದೆ. ಇತ್ತೀಚೆಗೆ ಇಲ್ಲಿ ನಡೆಯುತ್ತಿರುವ ಕಲ್ಲು ಗಣಿಗಾರಿಕೆಯಿಂದಾಗಿ ಪ್ರಾಣಿಗಳಿಗೆ ಸದಾ ಜೀವಭಯ. ಹಾಗಾಗಿ ಅವು ನಾಡಿಗೆ ನುಗ್ಗಿ, ನಾಡಿನ ಜನರಿಗೂ ಪ್ರಾಣಭಯ!

ಮಧ್ಯಾಹ್ನ ಸುಮಾರು 2 ಗಂಟೆಗೆ ಜೋಳದ ಹೊಲದಲ್ಲಿ ಕರಡಿ ಕಾಣಿಸಿಕೊಂಡ ಸುದ್ದಿ ಊರೆಲ್ಲ ಹಬ್ಬಿತು. 'ಅದ್ಯಾವುದೋ ಡೈನೊಸಾರ್ ಇರಬಹುದೇ...' ಎಂಬಷ್ಟು ಕುತೂಹಲದಲ್ಲಿ ನೂರಾರು ಜನ ಸೇರಿ ಜಾತ್ರೆಯೇ ಸೃಷ್ಟಿಯಾಯಿತು. ಜನಸಾಗರದ ಮಧ್ಯೆ ಬೆರಳೆಣಿಕೆಯ ಪೊಲೀಸರು, ಅರಣ್ಯ ಇಲಾಖೆಯ ಸಿಬ್ಬಂದಿ ಪರಿಸ್ಥಿತಿ ತಹಬದಿಗೆ ತರಲು ಹರಸಾಹಸ ಮಾಡುತ್ತಿದ್ದರು. ಜನರ ಕಿರುಚಾಟ, ಅರಚಾಟ, ಆರ್ಭಟ ಮೇರೆ ಮೀರಿತ್ತು.

ಕರಡಿಯನ್ನು ಕಲ್ಲು ಹೊಡೆದು ಆಗಲೇ ಹೊಲದಿಂದ ಬೇಲಿಗೆ ಓಡಿಸಲಾಗಿತ್ತು. ಕರಡಿ ಕಲ್ಲು ಬಂಡೆಯನ್ನೇನೋ ಇಷ್ಟ ಪಡುತ್ತದೆ. ಆದರೆ ಅದರ ಕಲ್ಲನ್ನಲ್ಲ. ಆ ಬಂಡೆಯನ್ನು ಪುಡಿ ಮಾಡಿ ಕಲ್ಲು ಮಾಡಿದ್ದರಿಂದಲೇ ಬಹುಶಃ ಇಲ್ಲಿಗೆ ಬಂದಿರಬೇಕು. ನಿಶಾಚರಿಯಾದ ಕರಡಿ ಕತ್ತಲನ್ನು ಇಷ್ಟಪಡುವ ಜೀವಿ. ಆದರೆ ಜನರ ಕಲ್ಲೇಟಿನ ರುಚಿ ತಿಂದು ಅದಕ್ಕೆ ತಲೆ ತಿರುಗಿದಂತಾಗಿತ್ತು. ಬೇಲಿಯ ಮರೆಯಲ್ಲಿ ಏದುಸಿರು ಬಿಡುತ್ತಿದ್ದ ಕರಡಿಗೆ ಉಸಿರಾಡಲೂ ಸಮಯ ಕೊಡದೆ ಮತ್ತೆ ಜನರು ಕಲ್ಲು ಬೀಸಿದರು. ಕಲ್ಲಿನ ರುಚಿ, ದೊಣ್ಣೆಯಿಂದ ತಿವಿತ– ಹೀಗೆ ಬೇಲಿಯಿಂದ ಅದನ್ನು ಹೊರತರಲು ನಾನಾ ಪ್ರಯೋಗಗಳು ನಿರಂತರವಾಗಿ ನಡೆದವು.

ಈ ನಡುವೆ ರಾಷ್ಟ್ರೀಯ ಹೆದ್ದಾರಿಯಾದ ಬೆಂಗಳೂರು–ಊಟಿ ರಸ್ತೆಯಲ್ಲಿ ವಾಹನಗಳ ದಟ್ಟಣೆ ಶುರುವಾಯಿತು. ಬಸ್ಸು, ಕಾರು ನಿಲ್ಲಿಸಿ ನೂರಾರು ಜನರು ಧಾವಿಸಿ ಬಂದರು. ಸದಾ ಕಾಡಿನ ನೀರವ, ನಿಶಬ್ದ ವಾತಾವರಣದಲ್ಲಿ ಇದ್ದ ಕರಡಿಗೆ ಜನರ ಗುಂಪು ಆತಂಕ ಹೆಚ್ಚಿಸಿತ್ತು. ವನ್ಯಜೀವಿಗಳು ನಾಡಿಗೆ ಬಂದಾಗ ಅವುಗಳಿಗೆ ಹೆದರಿಕೆ ಆಗದಂತೆ ನೋಡಿಕೊಳ್ಳುವುದನ್ನು ನಾವು ಕಲಿಯುವುದು ಯಾವಾಗ? ಆ ಪ್ರಾಣಿಗಳಿಗೆ ಭಯವಾಗದಿದ್ದರೆ ಅವುಗಳನ್ನು ಹಿಡಿಯುವುದು ಸುಲಭ. ಜನರ ಪ್ರಾಣಕ್ಕೂ ಅದೇ ಕ್ಷೇಮ. ಆದರೆ ನಮಗೆ ಕಾಡು ಪ್ರಾಣಿಗಳು ಊರಿಗೆ ಬಂದಾಗ ಅದೇ ಬಲುದೊಡ್ಡ ಮನರಂಜನೆ!

ಸಂಜೆ 4 ಗಂಟೆಯಾಯಿತು. ಬೇಲಿಯಲ್ಲಿದ್ದ ಕರಡಿಯನ್ನು ಸೆರೆ ಹಿಡಿಯಲು ಅರಣ್ಯ ಇಲಾಖೆ ಸಿಬ್ಬಂದಿ ಬಲೆ ಹಿಡಿದು ತಯಾರಾಗಿದ್ದರೆ, ಕರಡಿಯನ್ನು ಹೊರದಬ್ಬಲು ಜನರು ದೊಣ್ಣೆಗಳನ್ನು ಹಿಡಿದು ಸಿದ್ಧರಾಗಿದ್ದರು. ಬೇಲಿಗಳನ್ನು ಕೆಲವರು ತುಸು ಕತ್ತರಿಸಿದರು. ಕಿರುಚಾಟ, ಪಟಾಕಿಯ ಭರಾಟೆ, ಸಿಡಿತ– ಇದ್ಯಾವುದಕ್ಕೂ ಆ ಕರಡಿ ಜಗ್ಗಲಿಲ್ಲ. ಅದಕ್ಕೆ ನಿಜಕ್ಕೂ ಚಕ್ರವ್ಯೂಹದೊಳಗೆ ಸಿಲುಕಿದಂತೆ ಆಗಿತ್ತು. ಸುತ್ತಲೂ, ಬಲೆ ಹಿಡಿದು ನಿಂತಿದ್ದ ಜನ, ಅವರ ಕೈಲಿ ವಿವಿಧ ಆಯುಧ, ಪಟಾಕಿ, ಒಂದೇ ಎರಡೇ! ಪಾಪ ಕರಡಿ. ಊರೊಳಕ್ಕೆ ಬಂದದ್ದೇ ಮಹಾಪರಾಧವಾಗಿದೆ ಎನ್ನುವಂತೆ ಪರಿತಪಿಸುತ್ತಿತ್ತು.

ಅವತ್ತು ಅರಣ್ಯ ಸಿಬ್ಬಂದಿಯ ಸಂಖ್ಯೆಯೂ ಕಡಿಮೆಯಿತ್ತು. ಸಮೀಪದ ಊರಲ್ಲಿ ಆನೆಯೊಂದು ಸತ್ತಿದ್ದರಿಂದ ಸಿಬ್ಬಂದಿ ಆ ಕಡೆಗೂ ಹೋಗಿದ್ದರು. ಕರಡಿಗೆ ಚುಚ್ಚುಮದ್ದು ನೀಡಲು ಡಾಕ್ಟರ್ ಬರುವುದನ್ನೇ ಸಿಬ್ಬಂದಿ